CCE-III-RR/PR/PF/NSR/NSPR(A)/111/7126

**A**

ಆಗಸ್ಟ್ 2024 ರ ಪರೀಕ್ಷೆ-3

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR/PR/PF/ NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 97-K**
**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 05. 08. 2024 ] [ Date : 05. 08. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**05. 08. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಭಾರತದ ಸಂವಿಧಾನ ಜಾರಿಗೆ ಬಂದದ್ದು

   (A) 1950 ಜನವರಿ 26

   (B) 1949 ನವೆಂಬರ್ 26

   (C) 1947 ಆಗಸ್ಟ್ 15

   (D) 1946 ಡಿಸೆಂಬರ್ 11

2. ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ನಮ್ಮ ಸಂವಿಧಾನದ ಈ ವಿಧಿಯು ಆತ್ಮ ಮತ್ತು ಹೃದಯವಿದ್ದಂತೆ

   (A) ವಿಧಿ – 01

   (B) ವಿಧಿ – 21

   (C) ವಿಧಿ – 32

   (D) ವಿಧಿ – 51

3. ರಾಜ್ಯಸಭೆಯ ಸದಸ್ಯರ ಅಧಿಕಾರದ ಅವಧಿ

(A) 5 ವರ್ಷಗಳು

(B) 6 ವರ್ಷಗಳು

(C) 8 ವರ್ಷಗಳು

(D) 10 ವರ್ಷಗಳು

4. ಸಮಾನ ಕೆಲಸಕ್ಕೆ ಸಮಾನ ವೇತನ ಇದು ಈ ತತ್ವವಾಗಿದೆ

(A) ಸಮಾಜವಾದಿ ತತ್ವ

(B) ಗಾಂಧಿವಾದಿ ತತ್ವ

(C) ಉದಾರವಾದಿ ತತ್ವ

(D) ಮಾನವತಾವಾದಿ ತತ್ವ

5. ನಮ್ಮ ಸಂವಿಧಾನದ ರಕ್ಷಕ

(A) ರಾಷ್ಟ್ರಪತಿ

(B) ಪ್ರಧಾನ ಮಂತ್ರಿ

(C) ಸಂಸತ್ತು

(D) ಸರ್ವೋಚ್ಚ ನ್ಯಾಯಾಲಯ

6. ರಾಜ್ಯಪಾಲರನ್ನು ನೇಮಕ ಮಾಡುವವರು

(A) ಪ್ರಧಾನ ಮಂತ್ರಿ

(B) ರಾಷ್ಟ್ರಪತಿ

(C) ಉಪರಾಷ್ಟ್ರಪತಿ

(D) ರಾಜ್ಯದ ಮುಖ್ಯ ನ್ಯಾಯಾಧೀಶರು

7. ರಾಜ್ಯ ಶಾಸಕಾಂಗದ ಕೆಳಮನೆ

(A) ವಿಧಾನಸಭೆ

(B) ವಿಧಾನ ಪರಿಷತ್ತು

(C) ವಿಧಾನ ಮಂಡಲ

(D) ವಿಧಾನಸೌಧ

8. ಒಂದು ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ

(A) ಲೋಕ ಅದಾಲತ್

(B) ಸೆಷನ್ಸ್ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಸಿವಿಲ್ ನ್ಯಾಯಾಲಯ

9. ಪಂಚಾಯತ್‌ರಾಜ್ ವ್ಯವಸ್ಥೆಯ ಬೆನ್ನೆಲುಬು

(A) ಗ್ರಾಮಪಂಚಾಯಿತಿ

(B) ತಾಲ್ಲೂಕ್ ಪಂಚಾಯಿತಿ

(C) ಗ್ರಾಮಸಭೆ

(D) ಜಿಲ್ಲಾ ಪಂಚಾಯಿತಿ

10. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವ ಸ್ಥಳ

(A) ಬೆಳಗಾವಿ

(B) ಕಲಬುರ್ಗಿ

(C) ಮೈಸೂರು

(D) ಬೆಂಗಳೂರು

**II.** 11. ***A*-ಪಟ್ಟಿಯ ಅಂಶಗಳನ್ನು *B*-ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | **_B_-ಪಟ್ಟಿ** |
|---|---|
| (a) ರಾಷ್ಟ್ರಪತಿ | (i) ರಾಜ್ಯಸಭೆಯ ಮುಖ್ಯಸ್ಥರು |
| (b) ಉಪರಾಷ್ಟ್ರಪತಿ | (ii) ರಾಷ್ಟ್ರದ ಮುಖ್ಯಸ್ಥರು |
| (c) ಪ್ರಧಾನ ಮಂತ್ರಿ | (iii) ಸಂಪುಟದರ್ಜೆ ಮಂತ್ರಿಗೆ ಸಹಾಯಕ ಮಂತ್ರಿ |
| (d) ಸಭಾಪತಿ | (iv) ಕೇಂದ್ರ ಸರ್ಕಾರದ ಮುಖ್ಯಸ್ಥರು |
| (e) ಉಪ ಮಂತ್ರಿ | (v) ಲೋಕಸಭೆಯ ಮುಖ್ಯಸ್ಥರು |
| | (vi) ಸಂಪುಟದರ್ಜೆ ಮತ್ತು ರಾಜ್ಯದರ್ಜೆ ಸಚಿವರಿಗೆ ಸಹಾಯಕರು |
| | (vii) ರಾಜ್ಯದರ್ಜೆ ಮಂತ್ರಿಗೆ ಸಹಾಯಕ ಮಂತ್ರಿ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಭಾರತದ ಸಂವಿಧಾನದ ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದವರು ಯಾರು ?

13. ಏಕ ಪೌರತ್ವವನ್ನು ಅರ್ಥೈಸಿ.

14. 'ಆಸ್ತಿ ಹಕ್ಕ'ನ್ನು ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಿದ್ದು ಯಾವಾಗ ?

15. ಮೂಲಭೂತ ಕರ್ತವ್ಯಗಳನ್ನು ಭಾರತದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲು ಪ್ರಭಾವಬೀರಿದ ದೇಶ ಯಾವುದು ?

16. ಮಾಹಿತಿ ಹಕ್ಕು ಕಾಯ್ದೆ ಜನರಿಗೆ ತುಂಬಾ ಸಹಕಾರಿಯಾಗಿದೆ. ಹೇಗೆ ?

17. ಗಾಂಧಿವಾದ ತತ್ವಗಳೆಂದರೇನು ?

18. ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಘೋಷಿಸುವ ಅಧಿಕಾರವನ್ನು ಹೊಂದಿರುವವರು ಯಾರು ?

19. ಶೂನ್ಯವೇಳೆ ಎಂದರೇನು ?

20. ಅವಿಶ್ವಾಸ ನಿರ್ಣಯ ಯಾವಾಗ ಮಂಡಿಸಬಹುದು ?

21. ರಾಜ್ಯಸಭೆಯು ಹಣಕಾಸು ಮಸೂದೆಯನ್ನು ಎಷ್ಟು ದಿನಗಳವರೆಗೆ ತಡೆಹಿಡಿಯಬಹುದು ?

22. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಮಾಣವಚನ ಬೋಧಿಸುವವರು ಯಾರು ?

23. ರಾಜ್ಯದ ಅಡ್ವೊಕೇಟ್ ಜನರಲ್‌ಗಳನ್ನು ನೇಮಕ ಮಾಡುವವರು ಯಾರು ?

24. ಕಂದಾಯ ನ್ಯಾಯಾಲಯದ ಮುಖ್ಯ ಕಾರ್ಯವೇನು ?

25. ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಿರುವುದು.ಏಕೆ ?

26. ಮಹಾನಗರ ಪಾಲಿಕೆಯ ಸದಸ್ಯರನ್ನು ಏನೆಂದು ಕರೆಯುತ್ತಾರೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ನಮ್ಯ ಸಂವಿಧಾನ ಮತ್ತು ಅನಮ್ಯ ಸಂವಿಧಾನಕ್ಕಿರುವ ವ್ಯತ್ಯಾಸಗಳನ್ನು ತಿಳಿಸಿ.

28. ನ್ಯಾಯದ ವಿಧಗಳನ್ನು ಹೆಸರಿಸಿ.

29. ನಮ್ಮ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಸಂಕ್ಷಿಪ್ತವಾಗಿ ತಿಳಿಸಿ.

30. ಮೂಲಭೂತ ಹಕ್ಕುಗಳ ಗುಣಲಕ್ಷಣಗಳನ್ನು ತಿಳಿಸಿ.

31. ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳು ಯಾವುವು ?

32. ಸಂಸತ್ತಿನ ಎರಡು ಸದನಗಳು ಯಾವುವು ?

33. ರಾಷ್ಟ್ರಪತಿ ರಾಜ್ಯಸಭೆಗೆ ಯಾವ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದವರನ್ನು ನಾಮಕರಣ ಮಾಡುತ್ತಾರೆ ?

34. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳು ಯಾವುವು ?

35. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರಗಳನ್ನು ತಿಳಿಸಿ.

36. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಅಗತ್ಯತೆಯನ್ನು ತಿಳಿಸಿ.

37. ಉದಾರವಾದಿ ತತ್ವಗಳಿಗೆ ಎರಡು ಉದಾಹರಣೆ ಕೊಡಿ.

38. ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವ ವಿಧಾನವನ್ನು ತಿಳಿಸಿ.

39. ವಿಧಾನಸಭೆಯ ಸಭಾಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳು ಯಾವುವು ?

40. ಜಂಟಿ ಲೋಕಸೇವಾ ಆಯೋಗ ಕುರಿತು ಲಘು ಟಿಪ್ಪಣಿ ಬರೆಯಿರಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.

42. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

43. ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳಿಗೆ ಇರುವ ವ್ಯತ್ಯಾಸಗಳನ್ನು ತಿಳಿಸಿ.

44. ಮುಖ್ಯಮಂತ್ರಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

45. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ಮೇಲೆ ಹೇಗೆ ನಿಯಂತ್ರಣ ಹೊಂದಿರುತ್ತದೆ ?

46. ರಾಜ್ಯಲೋಕ ಸೇವಾ ಆಯೋಗಗಳ ಕಾರ್ಯಗಳನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

47. ಗ್ರಾಮಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.

DO NOT WRITE ANYTHING HERE